of. M.R. DORESWAMY
dviser, Education Reforms
(Cabinet Rank)
Government of Karnataka

Room No: 307, 3rd Floor
Vidhana Soudha, Bengaluru - 560 001
Telephone: Off: 080 22033983 / 22255704
Mobile: +91 98453 15252
E-mail: drmrdeduadvisorkar@gmail.com

GOVERNMENT OF KARNATAKA

ದಿನಾಂಕ: 13.01.2023

ಇವರಿಗೆ,
ಪ್ರೊ.ವಿ.ಸಿ.ವೀರಭದ್ರಪ್ಪ
ಮಾನ್ಯ ಕುಲಪತಿಗಳು
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ, ಶಂಕರಘಟ್ಟ
ಶಿವಮೊಗ್ಗ-577451

ಕುವೆಂಪು ವಿಶ್ವವಿದ್ಯಾಲಯ ಅಭಿವೃದ್ಧಿ ವಿಭಾಗ
ಸಂಖ್ಯೆ: 747
ದಿನಾಂಕ: 18/01/23

ಕುವೆಂಪು ವಿಶ್ವವಿದ್ಯಾಲಯ
18 JAN 2023
ಶಂಕರಘಟ್ಟ-577451
ಸಂ. 6983

ಸನ್ಮಾನ್ಯ ಡಾ॥ ವೀರಭದ್ರಪ್ಪ ನವರೇ,

**ಉಲ್ಲೇಖ: ತಮ್ಮ ಪತ್ರ ದಿನಾಂಕ: 09.01.2023**

***

ತಮ್ಮ ವಿಶ್ವವಿದ್ಯಾಲಯ ಈಗಾಗಲೇ 12 ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಸಕ್ರಿಯವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅಭಿವೃದ್ಧಿಪಡಿಸುತ್ತಿರುವುದು ಅತ್ಯಂತ ಸಂತೋಷದಾಯಕ ವಿಷಯ. ಉಳಿದಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆದಷ್ಟು ಶೀಘ್ರವಾಗಿ ಮುಗಿಸಿ, ದತ್ತು ಪಡೆದ ಶಾಲೆಗಳನ್ನು ಸರ್ಕಾರಕ್ಕೆ ಹಸ್ತಾಂತರ ಮಾಡಲು ಅಧಿಕೃತ ಕಾರ್ಯಕ್ರಮವನ್ನು ಆಯೋಜಿಸಿ ಲೋಕಾರ್ಪಣೆ ಮಾಡಬೇಕಾಗುತ್ತದೆ. ಈ ಕಾರ್ಯಕ್ರಮಕ್ಕೆ ಮಾನ್ಯ ಶಾಲಾ ಶಿಕ್ಷಣ ಮಂತ್ರಿಗಳೊಂದಿಗೆ ಸನ್ಮಾನ್ಯ ಶ್ರೀ. ಬಿ.ಎಸ್.ಯಡಿಯೂರಪ್ಪ ರವರನ್ನು ಆಹ್ವಾನಿಸಲಾಗುವುದು. ಈ ನಿಟ್ಟಿನಲ್ಲಿ ಸಕ್ರಿಯವಾಗಿ ಅಭಿವೃದ್ಧಿ ಕಾರ್ಯಗಳನ್ನು ಪೂರೈಸಲು ಕೋರುತ್ತೇನೆ.

ಆದರಗಳೊಂದಿಗೆ,

(ಪ್ರೊ.ಎಂ.ಆರ್.ದೊರೆಸ್ವಾಮಿ)

Vice-Chancellor's
Personal Section
To No. 714
Date 17/1/2023

Registrar's
Personal Section
To No. 357
Date 17/1/2023

Scanned with AnyScanner

ಪ್ರೊ. ಎಂ.ಆರ್. ದೊರೆಸ್ವಾಮಿ
ಸಲಹೆಗಾರರು – ಶಿಕ್ಷಣ ಸುಧಾರಣೆಗಳು
(ಸಂಪುಟ ದರ್ಜೆ ಸ್ಥಾನಮಾನ)
ಕರ್ನಾಟಕ ಸರ್ಕಾರ

ಕೊಠಡಿ ಸಂಖ್ಯೆ:260, 2ನೇ ಮಹಡಿ
ವಿಧಾನ ಸೌಧ, ಬೆಂಗಳೂರು– 560 001
ದೂರವಾಣಿ: 080–22033678
ಮೊಬೈಲ್ ನಂ: 9845315252
ಇ–ಮೇಲ್: drmrdeduadvisorkar@gmail.com

ದಿನಾಂಕ: 08–05–2021

15.05.21

Vice-Chancellor's Personal Section
No- 95
Date 16/6/2021

ಆತ್ಮೀಯರಾದ ಪ್ರೊ. ವೀರಭದ್ರಪ್ಪನವರೇ,

ವಿಶ್ವವಿದ್ಯಾನಿಲಯಗಳು ದತ್ತು ಪಡೆದಿರುವ ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಕ್ಕೆ ಸಂಬಂಧಪಟ್ಟಂತೆ ಈವರೆಗೂ ಕೈಗೊಂಡಿರುವ ಬೆಳವಣಿಗೆಗಳ ಬಗ್ಗೆ ವರದಿಯನ್ನು ನೀಡುವಂತೆ ವಾಟ್ಸಪ್ ಮುಖಾಂತರ ನಿಮ್ಮನ್ನು ಸಹ ಒಳಗೊಂಡಂತೆ ಎಲ್ಲಾ ಕುಲಪತಿಗಳನ್ನು ಕೋರಲಾಗಿತ್ತು. ಅದರಂತೆ, ತಮ್ಮ ವಿಶ್ವವಿದ್ಯಾಲಯದ ಕುಲಸಚಿವರು ನನಗೆ ದಿನಾಂಕ 22.4.21ರಂದು ಬರೆದ ಪತ್ರ ತಲುಪಿದೆ. ಧನ್ಯವಾದಗಳು.

ಕುಲಸಚಿವರ ಪತ್ರದಲ್ಲಿ, ಕುವೆಂಪು ವಿಶ್ವವಿದ್ಯಾಲಯವು ತನ್ನ ವ್ಯಾಪ್ತಿಗೆ ಬರುವ 12 ಸರಕಾರಿ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿ ಪಡಿಸಲು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪರಿಸರ ಆಧ್ಯಾಯನ ವಿಭಾಗದ ಪ್ರಾಧ್ಯಾಪಕರ ಅಧ್ಯಕ್ಷತೆಯಲ್ಲಿ 14 ಸದಸ್ಯರುಗಳುಳ್ಳ ಮೇಲ್ವಿಚಾರಣಾ ಸಮಿತಿಯನ್ನು ರಚಿಸಿ, ದಿನಾಂಕ 20.4.21ರಂದು ಜರುಗಿದ ಮೇಲ್ಕಂಡ ಸಮಿತಿಯ ಮೊಟ್ಟಮೊದಲನೆ ಸಭೆಯಲ್ಲಿ ದತ್ತು ಪಡೆದುರುವ 12 ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಪಡಿಸಲು ವಿಶ್ವವಿದ್ಯಾಲಯದ ಆಂತರಿಕ ಅನುದಾನದಲ್ಲಿ ಅಂದಾಜು ರೂ 50ಲಕ್ಷಗಳನ್ನು ಕಾಯ್ದಿರಿಸಲು ತಾವು ಮುಂದಾಗಿರುವ ವಿಷಯ ತಿಳಿದು ನನಗೆ ಸಂತೋಷವಾಗಿದೆ.

ಆದಾಗ್ಯೂ, ತಮಗೆ ತಿಳಿದಿರುವ ಹಾಗೆ ಸರ್ಕಾರಿ ಶಾಲೆಗಳ ದತ್ತು ಸ್ವೀಕಾರ ಪತ್ರ ವಿತರಣೆ ಕಾರ್ಯಕ್ರಮವು ರಾಜ್ಯದ ಸನ್ಮಾನ್ಯ ಮುಖ್ಯ ಮಂತ್ರಿಗಳಿಂದ ದಿನಾಂಕ 24/11/20 ರಂದು ಚಾಲನೆಗೊಂಡಿದ್ದು, ಆದೇ ದಿನದಂದು ತಾವು ಸಹ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ದತ್ತು ಸ್ವೀಕಾರ ಪತ್ರವನ್ನು ಸ್ವೀಕರಿಸಿರುತ್ತೀರಿ. ಆದರೆ ಈ ಕಾರ್ಯಕ್ರಮವಾದ 5 ತಿಂಗಳ ನಂತರ ಅಂದರೆ ದಿನಾಂಕ 20.4.21ರಂದು ಮೇಲ್ವಿಚಾರಣಾ ಸಮಿತಿಯ ಮೊಟ್ಟ ಮೊದಲನೇ ಸಭೆಯನ್ನು ಆಯೋಜಿಸಲಾಗಿರುತ್ತದೆ. ಇದು ನಿಜಕ್ಕೂ ನನಗೆ ನಿರಾಸೆಯನ್ನು ಉಂಟುಮಾಡಿದೆ.

ಪ್ರೊ. ವೀರಭದ್ರಪ್ಪನವರೇ, ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಸರ್ಕಾರಿ ಶಾಲೆಗಳ ದತ್ತು ಕಾರ್ಯವಂತೂ ಅತ್ಯಂತ ಪ್ರಿಯವಾದ ವಿಷಯ. ಕುವೆಂಪು ವಿಶ್ವವಿದ್ಯಾಲಯವು ಸನ್ಮಾನ್ಯ ಮುಖ್ಯ ಮಂತ್ರಿಗಳ ಜಿಲ್ಲಾ ವ್ಯಾಪ್ತಿಗೆ ಬರುವುದರಿಂದ, ದತ್ತುಪಡೆದಿರುವ ಸರ್ಕಾರಿ ಶಾಲೆಗಳಲ್ಲಿನ ಅಭಿವೃದ್ಧಿ ಕಾರ್ಯದ ಸಂಬಂಧ ಕುವೆಂಪು ವಿಶ್ವವಿದ್ಯಾಲಯದಲ್ಲಿ ಈವರೆಗೂ ಆಗಿರುವ ಬೆಳವಣಿಗೆಗಳು ಅವರಿಗೆ ನಿಜಕ್ಕೂ ತೃಪ್ತಿದಾಯಕವಾಗಿರುವುದಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿರುತ್ತದೆ .

...2

Scanned with AnyScanner

ಎಂ.ಆರ್. ದೊರೆಸ್ವಾಮಿ
ಹೆಗಾರರು – ಶಿಕ್ಷಣ ಸುಧಾರಣೆಗಳು
ಂಪುಟ ದರ್ಜೆ ಸ್ಥಾನಮಾನ)
ರ್ನಾಟಕ ಸರ್ಕಾರ

ಕೊಠಡಿ ಸಂಖ್ಯೆ:260, 2ನೇ ಮಹಡಿ
ವಿಧಾನ ಸೌಧ, ಬೆಂಗಳೂರು– 560 001
ದೂರವಾಣಿ: 080–22033678
ಮೊಬೈಲ್ ನಂ: 9845315252
ಇ–ಮೇಲ್: drmrdeduadvisorkar@gmail.com



ಆದುದರಿಂದ, ವಿಶ್ವವಿದ್ಯಾಲಯವು ದತ್ತು ಪಡೆದಿರುವ ಸರ್ಕಾರಿ ಶಾಲೆಗಳಲ್ಲಿನ ಅಭಿವೃದ್ಧಿ ಕಾರ್ಯದ ಬಗ್ಗೆ ತಾವೇ ಖುದ್ದು ಗಮನ ಹರಿಸಿ, ಸಂಬಂಧಪಟ್ಟ ಅಧಿಕಾರಿಗಳು ಈ ಕಾರ್ಯದ ಬಗ್ಗೆ ತ್ವರಿತ ವಾಗಿ ಕಾರ್ಯೋನ್ಮುಖರಾಗಬೇಕೆಂದು ತಾವು ನಿರ್ದೇಶನ ನೀಡುವುದರೊಂದಿಗೆ, ಈ ಕಾರ್ಯಕ್ಕೆ ಇನ್ನು ಹೆಚ್ಚಿನ ಹಣವನ್ನು ಮೀಸಲಿಡಿಸಲು ತಮ್ಮ ವಿಶ್ವವಿದಾಲಯದ ಹಣಕಾಸು ವ್ಯವಹಾರ ನಡೆಸುತ್ತಿರುವ ಬ್ಯಾಂಕಿನ ಅಧಿಕಾರಿಗಳೊಂದಿಗೆ ಚರ್ಚಿಸಿ ಅವರ ಸಿ.ಎಸ್. ಆರ್.(CSR ) ಚಟುವಟಿಕೆಯಡಿ ದತ್ತು ಶಾಲೆಗಳಲ್ಲಿನ ಅಭಿವೃದ್ಧಿ ಕಾರ್ಯಕ್ಕೆ ಆರ್ಥಿಕ ನೆರವು ನೀಡುವಂತೆ ಬ್ಯಾಂಕಿನ ಅಧಿಕಾರಿಗಳನ್ನು ತಾವು ಕೋರಬೇಕೆಂದು ನಾನು ಬಯಸುತ್ತೇನೆ. ತದನಂತರ ಈ ಶಾಲೆಗಳಿಗೆ ಸಣ್ಣ ಪುಟ್ಟ ಅವಶ್ಯಕತೆಗಳನ್ನು ಒದಗಿಸಿ ಪರಿಹಾರ (ಸರ್ಕಾರಿ ಕಾರ್ಯಕ್ರಮ) ಅಡಿಯಲ್ಲಿ ಕುಡಿಯುವ ನೀರು, ಶೌಚಾಲಯ ಇದರ ಕಡೆ ಗಮನ ಹರಿಸುವುದು. ಉಪಾಧ್ಯಾರುಗಳಿಗೆ orientation program ಇತರೆ ಕಾರ್ಯಕ್ರಮಗಳು ಮಾಡುವಂತಹದ್ದು ಬೇಕಾದಷ್ಟು ಇವೆ. ಆದ್ದರಿಂದ ದಯವಿಟ್ಟು ತ್ವರಿತವಾಗಿ ಕಾರ್ಯಗಳನ್ನು ಮುಂದುವರೆಸಿ, ಇದು ನನ್ನ ಬಯಕೆ.

ವಂದನೆಗಳೊಂದಿಗೆ

ಪ್ರೊ. ಎಂ ಆರ್ ದೊರೆಸ್ವಾಮಿ

ರವರಿಗೆ
ಪ್ರೊ. ವೀರಭದ್ರಪ್ಪರವರು
ಕುಲಪತಿಗಳು
ಕುವೆಂಪು ವಿಶ್ವ ವಿದ್ಯಾಲಯ
ಜ್ಞಾನ ಸಹ್ಯಾದ್ರಿ ಶಂಕರ ಘಟ್ಟ ಶಿವಮೊಗ್ಗ 577451

Scanned with AnyScanner

Reg post with Ack

ಕುವೆಂಪು ವಿಶ್ವವಿದ್ಯಾಲಯ
KUVEMPU UNIVERSITY
(Accredited by NAAC with "A" Grade & Ranked 73rd by NIRF-2020)

ರವಾನಿಸಿದೆ

(O) : 08282-256221
(M) : 9449825221
Fax : 08282-256262
E-mail : reg.admn@kuvempu.ac.in
kureg14@gmail.com
Website : www.kuvempu.ac.in

ಪ್ರೊ. ಎಸ್.ಎಸ್. ಪಾಟೀಲ್, ಎಂ.ಎಸ್ಸಿ., ಎಂ.ಇಡಿ., ಪಿಹೆಚ್.ಡಿ.,
ಕುಲಸಚಿವ
Prof. S.S. Patil, M.Sc., M.Ed., Ph.D.
Registrar

ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577 451,
ಶಿವಮೊಗ್ಗ ಜಿಲ್ಲೆ, ಕರ್ನಾಟಕ
Jnanasahyadri, Shankaraghatta-577 451,
Shivamogga Dist., Karnataka, India.

ಸಂಖ್ಯೆ:ಕುವಿ/ಡಿವಿ-1/236/2021-22 -274- ದಿನಾಂಕ:22-04-2021

ಗೆ,

ಪ್ರೊ.ಎಂ.ಆರ್.ದೊರೆಸ್ವಾಮಿ,
ಸಲಹೆಗಾರರು-ಶಿಕ್ಷಣ ಸುಧಾರಣೆಗಳು (ಸಂಪುಟ ದರ್ಜೆ ಸ್ಥಾನಮಾನ),
ಕರ್ನಾಟಕ ಸರ್ಕಾರ,
ಕೊಠಡಿ ಸಂಖ್ಯೆ:260, 2ನೇ ಮಹಡಿ
ವಿಧಾನ ಸೌಧ, ಬೆಂಗಳೂರು-560001

ಮಾನ್ಯರೇ,

**ವಿಷಯ:** ವಿಶ್ವವಿದ್ಯಾಲಯಗಳ ದತ್ತು ತೆಗೆದುಕೊಂಡು ಸರ್ಕಾರಿ ಶಾಲೆಗಳಲ್ಲಿನ ಅಭಿವೃದ್ಧಿ ಕುರಿತು.

**ಉಲ್ಲೇಖ:** Your Whats app Dated:24-01-2021

******

ಸೂಚಿತ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ತಾವು AKSHARA ಯೋಜನೆಯಡಿಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಭಾಷಾಶಾಸ್ತ್ರ, ಭಾಷೆ ಮತ್ತು ಸಾಕ್ಷರತೆ, ಶಿಕ್ಷಣ ಮತ್ತು ಜ್ಞಾನ ನೀಡುವ ಹಾಗೂ ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಎಲ್ಲಾ ವಿಶ್ವವಿದ್ಯಾಲಯಗಳು ತನ್ನ ವ್ಯಾಪ್ತಿಗೆ ಒಳಪಡುವ 10 ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿ ಪಡಿಸುವಂತೆ ತಾವು ತಿಳಿಸಿರುವ ಹಿನ್ನಲೆಯಲ್ಲಿ, ನಮ್ಮ ವಿಶ್ವವಿದ್ಯಾಲಯವು ಈಗಾಗಲೇ 12 ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅನುಬಂಧ-01 ರಲ್ಲಿನ ಅಂಶಗಳ ಅನುಸಾರ ಪ್ರಕ್ರಿಯೆ ಹಂತದಲ್ಲಿದೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಕುವೆಂಪು ವಿಶ್ವವಿದ್ಯಾಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ 577 451

Scanned with AnyScanner

ಅನುಬಂಧ-1

| ಕ್ರ.ಸಂ. | ವಿವರ |
|---|---|
| 01 | ಕುವೆಂಪು ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ಸರ್ಕಾರದ ಆದೇಶದ ಮೇರೆಗೆ, ಒಟ್ಟು 12 ಸರ್ಕಾರಿ ಶಾಲೆಗಳನ್ನು ದತ್ತು ಪಡೆದಿದ್ದು, (ದತ್ತು ಪಡೆದಿರುವ ಶಾಲೆಗಳ ಪಟ್ಟಿಯ ಪ್ರತಿಯನ್ನು ಲಗತ್ತಿಸಲಾಗಿದೆ.) |
| 02 | ಕುವೆಂಪು ವಿಶ್ವವಿದ್ಯಾಲಯವು ದತ್ತು ತೆಗೆದುಕೊಂಡಿರುವ 12 ಸರ್ಕಾರಿ ಶಾಲೆಗಳನ್ನು ಕ್ರಿಯಾ ಯೋಜನೆಯನೆಯ ಅನುಸಾರ ಅಭಿವೃದ್ಧಿ ಪಡಿಸಲು ಮೇಲ್ವಿಚಾರಣಾ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯ ಸಭೆಯನ್ನು ದಿನಾಂಕ:20-04-2021ರಂದು ನಡೆಸಿದ್ದು, ಸದರಿ ಸಭೆಯಲ್ಲಿ ಈ ಕೆಳಕಂಡಂತೆ ಅನುಷ್ಠಾನಗೊಳಿಸಲು ನಿರ್ಣಯಿಸಲಾಯಿತು.<br>1. ಮೇಲ್ವಿಚಾರಣಾ ಸಮಿತಿಯಲ್ಲಿ 04 ಸದ್ಯಸರು ಒಳಗೊಂಡ ಉಪ ಸಮಿತಿಯನ್ನು ರಚಿಸಿ ಸದರಿ ಸಮಿತಿಯು ಶಾಲೆಗಳಿಗೆ ಭೇಟಿ ನೀಡುವುದು.<br>2. ಸದರಿ ಸಮಿತಿಯು ಶಾಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಶಾಲೆಗಳಗೆ ಭಾಷಾಶಾಸ್ತ್ರ, ಭಾಷೆ ಮತ್ತು ಸಾಕ್ಷರತೆ, ಶಿಕ್ಷಣ ಮತ್ತು ಜ್ಞಾನ ನೀಡುವ ಹಾಗೂ ಅಭಿವೃದ್ಧಿ ಪಡಿಸುವ ಉದ್ದೇಶದಿಂದ Prof.M.R.Doreswamy, Adviser. Education Reforms (Cabinet Rank) Government of Karnataka -ಇವರು ತಿಳಿಸಿರುವ ಕ್ರಿಯಾಯೋಜನೆಯ ಹಂತ-1ರಲ್ಲಿನ ಅಂಶಗಳ ಆಧಾರದ ಮೇಲೆ ಅನುಷ್ಠಾನಗೊಳಿಸಲು ವರದಿಯನ್ನು ತಯಾರಿಸಿ ವಿಶ್ವವಿದ್ಯಾಲಯಕ್ಕೆ ನೀಡುವುದು.<br>3. ದತ್ತು ಪಡೆದಿರುವ ಶಾಲೆಗಳಲ್ಲಿನ ಮೂಲ-ಸೌಕರ್ಯಗಳ ಬಗ್ಗೆ ಪರೀಶೀಲಿಸಿ ಅತ್ಯವಶ್ಯಕವಾಗಿ ಸದರಿ ಶಾಲೆಗಳಿಗೆ ಬೇಕಾದ ಅಗತ್ಯತೆಯ ಅನುಸಾರ ಅನುಷ್ಠಾನಗೊಳಿಸಲು ವರದಿ ತಯಾರಿಸಿ ವಿಶ್ವವಿದ್ಯಾಲಯಕ್ಕೆ ನೀಡುವುದು.<br>4. ಸದರಿ ಉಪ ಸಮಿತಿಯು ಕ್ರಿಯಾಯೋಜನೆಯ ಹಂತ-1ರಲ್ಲಿನ ಅಂಶಗಳ ಆಧಾರದ ಮೇಲೆ ಮೊದಲನೇ ಹಂತದ ಪ್ರಕ್ರಿಯೆಯನ್ನು ಕೈಗೊಳ್ಳಲು ವರದಿಯನ್ನು ನೀಡುವುದು. (ಮೇಲ್ವಿಚಾರಣಾ ಸಮಿತಿಯ ಪ್ರತಿಯನ್ನು ಲಗತ್ತಿಸಲಾಗಿದೆ.)<br>5. ವಿಶ್ವವಿದ್ಯಾಲಯವು ಈಗಾಗಲೇ ದತ್ತು ತೆಗೆದುಕೊಂಡ 12 ಸರ್ಕಾರಿ ಶಾಲೆಗಳನ್ನು ಕ್ರಿಯಾಯೋಜನೆಯ ಅನುಸಾರ ಅಭಿವೃದ್ಧಿ ಪಡಿಸಲು ವಿಶ್ವವಿದ್ಯಾಲಯದ ಆಂತರಿಕ ಅನುದಾನದಲ್ಲಿ ಅಂದಾಜು ರೂ.50-00 ಲಕ್ಷಗಳನ್ನು ಕಾಯ್ದರಿಸಲಾಗಿದೆ. |
| 03 | ಮೇಲ್ವಿಚಾರಣಾ ಸಮಿತಿ ಸಭೆಯ ನಿರ್ಣಯದಂತೆ ಈಗಾಗಲೇ ದತ್ತು ಪಡೆದಿರುವ ಶಾಲೆಗಳನ್ನು ಅಭಿವೃದ್ಧಿ ಪಡಿಸುವ ಕುರಿತಂತೆ ಪ್ರಕ್ರಿಯೆಯನ್ನು ಆರಂಭಿಸಲು ಕೂಲಂಕುಶವಾಗಿ ಅಧ್ಯಯನ ಮಾಡಿ ವರದಿಯನ್ನು ನೀಡುವ ಸಲುವಾಗಿ ಶಾಲೆಗಳಿಗೆ ಭೇಟಿ ನೀಡಲು ಮೇಲ್ವಿಚಾರಣಾ ಸಮಿತಿಯ ಉಪ ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ಶಾಲೆಗಳಿಗೆ ಅತೀ ತುರ್ತಾಗಿ ಭೇಟಿ ನೀಡಿ ಶಾಲೆಗಳ ಸ್ಥಿತಿ-ಗತಿಗಳನ್ನು ಪರಿಶೀಲಿಸಿ ಮತ್ತು ಸದರಿ ಶಾಲೆಗಳ ಅಭಿವೃದ್ಧಿಯ ಕುರಿತಂತೆ ಪ್ರಸ್ತಾವನೆಗಳನ್ನು ಸಿದ್ಧಪಡಿಸಿ ವಿಶ್ವವಿದ್ಯಾಲಯಕ್ಕೆ ಅತೀ ತುರ್ತಾಗಿ ಸಲ್ಲಿಸುವಂತೆ ತಿಳಿಸಲಾಗಿದೆ. (ಮೇಲ್ವಿಚಾರಣಾ ಸಮಿತಿಯ ಉಪ ಸಮಿತಿಯ ಪ್ರತಿಯನ್ನು ಲಗತ್ತಿಸಲಾಗಿದೆ.) |
| 04 | ನಮ್ಮ ವಿಶ್ವವಿದ್ಯಾಲಯವು ಈಗಾಗಲೇ 12 ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಕ್ರಿಯಾಯೋಜನೆಯ ಅನುಸಾರ ಪ್ರಕ್ರಿಯೆ ಹಂತದಲ್ಲಿದೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಲಾಗಿದೆ. |

ಕುಲಸಚಿವರು

ಕುಲಸಚಿವ
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ-577 451

Scanned with AnyScanner

ಫ್ಯಾಕ್ಸ್: 08282-256262
ಇ-ಮೇಲ್:kudevelop@gmail.com
08282-256147 (ಅಭಿವೃದ್ಧಿ ವಿಭಾಗ)
ವೆಬ್ ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451

(Accredited by NAAC with "A" Grade & Ranked 73rd by NIRF)

ರವಾನಿಸಿದೆ

ಸಂಖ್ಯೆ:ಕುವಿ/ಡಿವಿ-1/236/2020-2021 4948 ದಿನಾಂಕ:10-02-2021

ಸುತ್ತೋಲೆ

ವಿಷಯ: **Adoption of Government School by University-reg.**

ಉಲ್ಲೇಖ:
1. Prof.M.R.Doreswamy, Adviser. Education Reforms (Cabinet Rank) Government of Karnataka. Letter Dated 01-08-2020.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:05-02-2021.

******

Prof.M.R.Doreswamy, Adviser. Education Reforms(Cabinet Rank) Government of Karnataka -ಇವರು ಉಲ್ಲೇಖಿತ(01)ರ ಪತ್ರದಲ್ಲಿ AKSHARA ಯೋಜನೆಯಡಿಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಭಾಷಾಶಾಸ್ತ್ರ, ಭಾಷೆ ಮತ್ತು ಸಾಕ್ಷರತೆ, ಶಿಕ್ಷಣ ಮತ್ತು ಜ್ಞಾನ ನೀಡುವ ಹಾಗೂ ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಎಲ್ಲಾ ವಿಶ್ವವಿದ್ಯಾಲಯಗಳು ತನ್ನ ವ್ಯಾಪ್ತಿಗೆ ಒಳಪಡುವ 10 ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿ ಪಡಿಸುವಂತೆ ತಿಳಿಸಿರುವ ಹಿನ್ನಲೆಯಲ್ಲಿ, ತತ್ಸಂಬಂಧ ನಮ್ಮ ವಿಶ್ವವಿದ್ಯಾಲಯವು ಭಾಷಾಶಾಸ್ತ್ರ, ಭಾಷೆ ಮತ್ತು ಸಾಕ್ಷರತೆ, ಶಿಕ್ಷಣ ಮತ್ತು ಜ್ಞಾನ ನೀಡುವ ಹಾಗೂ ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಈಗಾಗಲೇ 10 ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡಿದೆ. ಆದರೆ ಉಲ್ಲೇಖ(02)ರಲ್ಲಿ ಮಾನ್ಯ ಕುಲಪತಿಗಳು 02 ಶಾಲೆಗಳನ್ನು ದತ್ತು ತೆಗೆದುಕೊಳ್ಳಲು ಆದೇಶಿಸಿರುವ ಹಿನ್ನಲೆಯಲ್ಲಿ, ತಮ್ಮ ಶಾಲೆಗಳನ್ನು ದತ್ತು ತೆಗೆದುಕೊಳ್ಳಲಾಗಿದೆ. ಈ ಸಂಬಂಧ ತಮ್ಮ ಶೈಕ್ಷಣಿಕ ಮತ್ತು ಪ್ರಗತಿಯ ಹಂತದ ಕುರಿತು ಸಂಪೂರ್ಣ ಮಾಹಿತಿಯನ್ನು ವಿಶ್ವವಿದ್ಯಾಲಯದ ಸಮಿತಿಯು ತಮ್ಮ ಶಾಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನೀಡಬೇಕಾಗಿ ಈ ಮೂಲಕ ತಿಳಿಸಲಾಗಿದೆ.

12/2/21

ಕುಲಸಚಿವರು,
ಕುಲಸಚಿವ
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ

ಗೆ,
1. ಮುಖ್ಯೋಪಾಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಿ.ಆರ್.ಪ್ರಾಜೆಕ್ಟ್, ತರೀಕೆರೆ ॥ತಾ॥ ಚಿಕ್ಕಮಗಳೂರು॥ಜಿ॥
2. ಮುಖ್ಯೋಪಾಧ್ಯಾಯರು, ಶಾಸಕರ ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತರೀಕೆರೆ, ತರೀಕೆರೆ ॥ತಾ॥ ಚಿಕ್ಕಮಗಳೂರು ॥ಜಿ॥

ಪ್ರತಿಗಳು:
1. Prof.M.R.Doreswamy, Adviser. Education Reforms (Cabinet Rank), Government of Karnataka, Room No. 260, 2nd Floor, Vidhana Soudha, Bangaluru-560001.
2. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು-577101
3. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ತರೀಕೆರೆ ॥ತಾ॥ ಚಿಕ್ಕಮಗಳೂರು ॥ಜಿ॥-577228
4. ಆಪ್ತ ಸಹಾಯಕರು: ಮಾನ್ಯ ಕುಲಪತಿಗಳು/ಮಾನ್ಯ ಕುಲಸಚಿವರು/ಮಾನ್ಯ ಕುಲಸಚಿವರು (ಪರೀಕ್ಷಾಂಗ)/ ಮಾನ್ಯ ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
5. ಕಛೇರಿ ಪ್ರತಿ.

Scanned with AnyScanner

ಫ್ಯಾಕ್ಸ್: 08282-256262
ಇ-ಮೇಲ್:ku.develop@gmail.com

08282-256147 (ಅಭಿವೃದ್ಧಿ ವಿಭಾಗ)
ವೆಬ್ ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451
(Accredited by NAAC with "A" Grade & Ranked 73rd by NIRF)

DESPATCHED

ಸಂಖ್ಯೆ:ಕುವಿ/ಡಿವಿ-1/236/2020-2021 3348. ದಿನಾಂಕ:18-11-2020

## ಸುತ್ತೋಲೆ

ವಿಷಯ: **Adoption of Government School by University-reg.**

ಉಲ್ಲೇಖ:
1. Prof.M.R.Doreswamy, Adviser. Education Reforms (Cabinet Rank) Government of Karnataka, Letter Dated:01-08-2020.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:18-11-2020.

******

Prof.M.R.Doreswamy, Adviser. Education Reforms(Cabinet Rank) Government of Karnataka -ಇವರು ಉಲ್ಲೇಖಿತ(01)ರ ಪತ್ರದಲ್ಲಿ AKSHARA ಯೋಜನೆಯಡಿಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಭಾಷಾಶಾಸ್ತ್ರ, ಭಾಷೆ ಮತ್ತು ಸಾಕ್ಷರತೆ, ಶಿಕ್ಷಣ ಮತ್ತು ಜ್ಞಾನ ನೀಡುವ ಹಾಗೂ ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಎಲ್ಲಾ ವಿಶ್ವವಿದ್ಯಾಲಯಗಳು ತನ್ನ ವ್ಯಾಪ್ತಿಗೆ ಒಳಪಡುವ 10 ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿ ಪಡಿಸುವಂತೆ ತಿಳಿಸಿರುವ ಹಿನ್ನಲೆಯಲ್ಲಿ, ತತ್ಸಂಬಂಧ ನಮ್ಮ ವಿಶ್ವವಿದ್ಯಾಲಯವು ಭಾಷಾಶಾಸ್ತ್ರ, ಭಾಷೆ ಮತ್ತು ಸಾಕ್ಷರತೆ, ಶಿಕ್ಷಣ ಮತ್ತು ಜ್ಞಾನ ನೀಡುವ ಹಾಗೂ ಅಭಿವೃದ್ಧಿ ಪಡಿಸುವ ಉದ್ದೇಶದಿಂದ ತಮ್ಮ ಶಾಲೆಗಳನ್ನು ಉಲ್ಲೇಖ(02)ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ದತ್ತು ತೆಗೆದುಕೊಳ್ಳಲಾಗಿದೆ. ಈ ಸಂಬಂಧ ತಮ್ಮ ಶೈಕ್ಷಣಿಕ ಮತ್ತು ಪ್ರಗತಿಯ ಹಂತದ ಕುರಿತು ಸಂಪೂರ್ಣ ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ನೀಡಿದ್ದಲ್ಲಿ, ಮುಂದಿನ ಹಂತದ ಪ್ರಕ್ರಿಯೆಕೈಗೊಳ್ಳಲು ಸಹಕಾರಿಯಾಗುತ್ತದೆ. ತತ್ಸಂಬಂಧ ಸದರಿ ಮಾಹಿತಿಯನ್ನು ತುರ್ತಾಗಿ ನೀಡಬೇಕಾಗಿ ತಿಳಿಸಲಾಗಿದೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಕುಲಸಚಿವರು
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ-577 451

ಗೆ,

1. ಮುಖ್ಯೋಪಾಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಡೇಕಲ್, ಶಿವಮೊಗ್ಗ ತಾ. ಶಿವಮೊಗ್ಗ ಜಿಲ್ಲೆ.
2. ಮುಖ್ಯೋಪಾಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಚಿನಕಟ್ಟೆ, ಶಿವಮೊಗ್ಗ ತಾ. ಶಿವಮೊಗ್ಗ ಜಿಲ್ಲೆ.
3. ಮುಖ್ಯೋಪಾಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಉರಗಡೂರು, ಶಿವಮೊಗ್ಗ ತಾ. ಶಿವಮೊಗ್ಗ ಜಿಲ್ಲೆ.
4. ಮುಖ್ಯೋಪಾಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಪಿಳ್ಳಂಗೆರೆ, ಶಿವಮೊಗ್ಗ ತಾ. ಶಿವಮೊಗ್ಗ ಜಿಲ್ಲೆ.
5. ಮುಖ್ಯೋಪಾಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಲಕ್ಕಿನಕೊಪ್ಪ, ಶಿವಮೊಗ್ಗ ತಾ. ಶಿವಮೊಗ್ಗ ಜಿಲ್ಲೆ.
6. ಮುಖ್ಯೋಪಾಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಉಂಬ್ಳೆಬೈಲು, ಶಿವಮೊಗ್ಗ ತಾ. ಶಿವಮೊಗ್ಗ ಜಿಲ್ಲೆ.
7. ಮುಖ್ಯೋಪಾಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗೋಣಿಬೀಡು, ಭದ್ರಾವತಿ ತಾ. ಶಿವಮೊಗ್ಗ ಜಿಲ್ಲೆ.
8. ಮುಖ್ಯೋಪಾಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸೆಲ್ಲಿಸರ, ಭದ್ರಾವತಿ ತಾ. ಶಿವಮೊಗ್ಗ ಜಿಲ್ಲೆ.
9. ಮುಖ್ಯೋಪಾಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಶಂಕರಘಟ್ಟ, ಭದ್ರಾವತಿ ತಾ. ಶಿವಮೊಗ್ಗ ಜಿಲ್ಲೆ.
10. ಮುಖ್ಯೋಪಾಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹುಣಸೆಕಟ್ಟೆ, ಭದ್ರಾವತಿ ತಾ. ಶಿವಮೊಗ್ಗ ಜಿಲ್ಲೆ.

ಪ್ರತಿಗಳು:

1. Prof.M.R.Doreswamy, Adviser. Education Reforms (Cabinet Rank), Government of Karnataka, Room No. 260, 2nd Floor, Vidhana Soudha, Bangaluru-560001.
2. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, [illegible], ಶಿವಮೊಗ್ಗ-577201
3. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ-577201
4. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಭದ್ರಾವತಿ.
5. ಆಪ್ತ ಸಹಾಯಕರು: ಮಾನ್ಯ ಕುಲಪತಿಗಳು/ಮಾನ್ಯ ಕುಲಸಚಿವರು/ಮಾನ್ಯ ಕುಲಸಚಿವರು (ಪರೀಕ್ಷಾಂಗ)/ ಮಾನ್ಯ ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
6. ಕಛೇರಿ ಪ್ರತಿ.

Scanned with AnyScanner

ಫ್ಯಾಕ್ಸ್: 08282-256262
ಇ-ಮೇಲ್:ku.develop@gmail.com

08282-256147 (ಅಭಿವೃದ್ಧಿ ವಿಭಾಗ)
ವೆಬ್ ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451
(Accredited by NAAC with "A" Grade & Ranked 73rd by NIRF)

ಸಂಖ್ಯೆ:ಕುವಿ/ಡಿವಿ-1/236/2021-22

ದಿನಾಂಕ:22-07-2021

## ಮೇಲ್ವಿಚಾರಣಾ ಸಮಿತಿ ಸಭೆಯ ನಡಾವಳಿಗಳು

*****

ಕುವೆಂಪು ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ಸರ್ಕಾರದ ಆದೇಶದ ಮೇರೆಗೆ, ಒಟ್ಟು 12 ಸರ್ಕಾರಿ ಶಾಲೆಗಳನ್ನು ದತ್ತು ಪಡೆದಿದ್ದು, ಈ ಸಂಬಂಧ ಮೇಲ್ವಿಚಾರಣಾ ಸಮಿತಿಯ ಉಪ ಸಮಿತಿಯು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲು ಹಾಗೂ ವರದಿಯನುಸಾರ ಶಾಲೆಗಳನ್ನು ಅಭಿವೃದ್ಧಿ ಪಡಿಸಲು ಸೂಕ್ತ ಸಲಹೆ ಸೂಚನೆ ಹಾಗೂ ಮಾರ್ಗದರ್ಶನ ನೀಡುವ ಸಂಬಂಧ ಮೇಲ್ವಿಚಾರಣಾ ಸಮಿತಿಯ ಸಭೆಯನ್ನು **ದಿನಾಂಕ:17-07-2021** ರಂದು ಬೆಳಿಗ್ಗೆ **11.00** ಗಂಟೆಗೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಕುಲಸಚಿವರ ಸಮ್ಮುಖದಲ್ಲಿ ವಿಶ್ವವಿದ್ಯಾಲಯದ ಕುವೆಂಪು ಶತಮಾನೋತ್ಸವ ಭವನದ ಹಳೆಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಮೇಲ್ವಿಚಾರಣಾ ಸಮಿತಿ ಸಭೆಯ ನಡಾವಳಿಗಳು.

| ಕ್ರ.ಸಂ | ಹಾಜರಿದ್ದ ಅಧ್ಯಕ್ಷರು/ಸದಸ್ಯರು: | |
|---|---|---|
| 01 | ಪ್ರೊ.ಬಿ.ಪಿ.ವೀರಭದ್ರಪ್ಪ, ಮಾನ್ಯ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ | ಅಧ್ಯಕ್ಷರು |
| 02 | ಪ್ರೊ.ಎಸ್.ಎಸ್.ಪಾಟೀಲ್, ಮಾನ್ಯ ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ | ಸದಸ್ಯರು |
| 03 | ಪ್ರೊ. ಜೆ. ನಾರಾಯಣ. ಸ್ನಾತಕೋತ್ತರ ಪರಿಸರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ | ಸದಸ್ಯರು |
| 04 | ಪ್ರೊ. ಯಾದವ್ ಡಿ ಬೋಡ್ಕೆ, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ | ಸದಸ್ಯರು |
| 05 | ಪ್ರೊ. ವೆಂಕಟೇಶ್, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ | ಸದಸ್ಯರು |
| 06 | ಡಾ. ವಿಜಯಕುಮಾರ, ಸ್ನಾತಕೋತ್ತರ ವನ್ಯಜೀವಿ ಮತ್ತು ನಿರ್ವಹಣಾ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ | ಸದಸ್ಯರು |
| 07 | ಡಾ. ಚಂದ್ರಶೇಖರ. ಈ., ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ | ಸದಸ್ಯರು |
| 08 | ಡಾ. ಸತ್ಯಪ್ರಕಾಶ್ ಎಂ.ಆರ್., ಸ್ನಾತಕೋತ್ತರ ಪತ್ರಿಕೋದ್ಯಮ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ | ಸದಸ್ಯರು |
| 09 | ಡಾ. ವೆಂಕಟೇಶ್, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ | ಸದಸ್ಯರು |
| 10 | ಡಾ. ರವಿಕುಮಾರ್, ಸ್ನಾತಕೋತ್ತರ ಗಣಕವಿಜ್ಞಾನ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ | ಸದಸ್ಯರು |
| 11 | ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ತರೀಕೆರೆ ॥ತಾ॥ ಚಿಕ್ಕಮಗಳೂರು ॥ಜಿ॥ | ಸದಸ್ಯರು |
| 12 | ಡಾ. ಬಿ. ತಿಪ್ಪೇಸ್ವಾಮಿ ಉಪ ಕುಲಸಚಿವರು, ಅಭಿವೃದ್ಧಿ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ | ಸಂಯೋಜನಾಧಿಕಾರಿಗಳು |
| **ಗೈರು ಹಾಜರಿದ್ದ ಸದಸ್ಯರು:** | | |
| 01 | ಡಾ.ದೇವಿದಾಸ್ ಗೈಬಣ್ಣ, ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ | ಸದಸ್ಯರು |
| 02 | ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಟ್ಯಾಂಕ್ ಮಹಲ್, ಶಿವಮೊಗ್ಗ-577201 | ಸದಸ್ಯರು |
| 03 | ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ-577201 | ಸದಸ್ಯರು |
| 04 | ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಭದ್ರಾವತಿ-577301 | ಸದಸ್ಯರು |

ಮು.ತಿ.ನೋ...

Scanned with AnyScanner

**ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿ:**

ಮೇಲ್ವಿಚಾರಣಾ ಸಮಿತಿ ಸಭೆಗೆ ಅಧ್ಯಕ್ಷರ ಅಪ್ಪಣೆ ಮೇರೆಗೆ ಸಂಯೋಜನಾಧಿಕಾರಿಗಳು ಮಾನ್ಯ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸುವ ಮೂಲಕ ಕುವೆಂಪು ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ಸರ್ಕಾರದ ಆದೇಶದ ಮೇರೆಗೆ, ಒಟ್ಟು 12 ಸರ್ಕಾರಿ ಶಾಲೆಗಳನ್ನು ದತ್ತು ಪಡೆದಿದ್ದು, ಈ ಸಂಬಂಧ ದತ್ತು ಪಡೆದಿರುವ ಶಾಲೆಗಳನ್ನು ಅಭಿವೃದ್ಧಿ ಪಡಿಸುವ ಕುರಿತಂತೆ ಪ್ರಕ್ರಿಯೆಯನ್ನು ಆರಂಭಿಸಲು ಕೂಲಂಕುಶವಾಗಿ ಅಧ್ಯಯನ ಮಾಡಿ ವರದಿಯನ್ನು ನೀಡುವ ಸಲುವಾಗಿ ಮೇಲ್ವಿಚಾರಣಾ ಸಮಿತಿಯನ್ನು ರಚಿಸಲಾಗಿದೆ ಎಂದು ತಿಳಿಸಿ, ಸಭೆಗೆ ವಿಶ್ವವಿದ್ಯಾಲಯವು ದತ್ತು ಪಡೆದಿರುವ 12 ಶಾಲೆಗಳ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯಿಸಿ, ತದನಂತರ ಈ ಮೊದಲು ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಿರ್ಣಯವನ್ನು ಸಭೆಯ ಗಮನಕ್ಕೆ ತಂದು ಸದರಿ ಸಭೆಯ ನಿರ್ಣಯದಂತೆ ಮೇಲ್ವಿಚಾರಣಾ ಸಮಿತಿಯ ಉಪ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಶಾಲೆಗಳಿಗೆ ಭೇಟಿ ನೀಡಿ ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲು ಹಾಗೂ ವರದಿಯನುಸಾರ ಶಾಲೆಗಳನ್ನು ಅಭಿವೃದ್ಧಿ ಪಡಿಸಲು ಸೂಕ್ತ ಸಲಹೆ ಸೂಚನೆ ಹಾಗೂ ಮಾರ್ಗದರ್ಶನ ನೀಡುವ ಸಂಬಂಧ ಮೇಲ್ವಿಚಾರಣಾ ಸಮಿತಿಯ ಸಭೆಯನ್ನು ಕರೆಯಲಾಗಿದೆ ಎಂದು ಸಭೆಗೆ ತಿಳಿಸಿದರು ಹಾಗೂ ಮೇಲ್ವಿಚಾರಣಾ ಸಮಿತಿಯ ಉಪ ಸಮಿತಿಯ ಭೇಟಿ ನೀಡಿದ ಬಗ್ಗೆ ಗುಂಪಿನ ಪ್ರಕಾರ ವರದಿಯನ್ನು ಸಭೆಗೆ ವಿವರಿಸಲು ಕೋರಿದರು.

1. ಮೇಲ್ವಿಚಾರಣಾ ಸಮಿತಿಯ ಉಪ ಸಮಿತಿಯ ಮೊದಲನೇ ಗುಂಪಿನ ಸದಸ್ಯರು ಹಾಗೂ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರಾದ ಪ್ರೊ.ಜೆ.ನಾರಾಯಣ. ಸ್ನಾತಕೋತ್ತರ ಪರಿಸರ ಅಧ್ಯಯನ ವಿಭಾಗ, ಇವರು ಮಾತನಾಡುತ್ತಾ, ತಮ್ಮ ತಂಡವನ್ನು ಸಭೆಗೆ ಪರಿಚಯಿಸಿ, ಭೇಟಿ ನೀಡಿ ಮೂರು ಶಾಲೆಗಳ ಸ್ಥಿತಿ-ಗತಿಗಳ ಬಗ್ಗೆ ಸಭೆಗೆ ವಿವರಿಸಿ, ಸದರಿ ಶಾಲೆಗೆ ಬೇಕಾದ ಅಗತ್ಯತೆಗಳ ಬಗ್ಗೆ ತಿಳಿಸಿ, ಈ ಸಂಬಂಧ ಸದರಿ ಶಾಲೆಗಳಿಗೆ ಬೇಕಾದ ಅಗತ್ಯತೆಗಳನ್ನು ಪೂರೈಸಲು ಶಿಪರಾಸ್ಸು ಮಾಡಿದರು.
2. ಮೇಲ್ವಿಚಾರಣಾ ಸಮಿತಿಯ ಉಪ ಸಮಿತಿಯ ಎರಡನೇ ಗುಂಪಿನ ಸದಸ್ಯರಾದ ಡಾ. ವೆಂಕಟೇಶ್, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ - ಇವರು ಮಾತನಾಡುತ್ತಾ, ತಮ್ಮ ತಂಡವನ್ನು ಸಭೆಗೆ ಪರಿಚಯಿಸಿ, ಭೇಟಿ ನೀಡಿ ಮೂರು ಶಾಲೆಗಳ ಸ್ಥಿತಿ-ಗತಿಗಳ ಬಗ್ಗೆ ಸಭೆಗೆ ವಿವರಿಸಿದರು ಹಾಗೂ ಸದರಿ ಶಾಲೆಗೆ ಬೇಕಾದ ಅಗತ್ಯತೆಗಳ ಬಗ್ಗೆ ತಿಳಿಸಿ, ಈ ಸಂಬಂಧ ಸದರಿ ಶಾಲೆಗಳಿಗೆ ಬೇಕಾದ ಅಗತ್ಯತೆಗಳನ್ನು ಪೂರೈಸಲು ಶಿಪರಾಸ್ಸು ಮಾಡಿದರು.
3. ಮೇಲ್ವಿಚಾರಣಾ ಸಮಿತಿಯ ಉಪ ಸಮಿತಿಯ ಮೂರನೇ ಗುಂಪಿನ ಸದಸ್ಯರಾದ ಡಾ. ಸತ್ಯಪ್ರಕಾಶ್,ಎಂ.ಆರ್. ಸ್ನಾತಕೋತ್ತರ ಪತ್ರಿಕೋದ್ಯಮ ಅಧ್ಯಯನ ವಿಭಾಗ, - ಇವರು ಮಾತನಾಡುತ್ತಾ, ತಮ್ಮ ತಂಡವನ್ನು ಸಭೆಗೆ ಪರಿಚಯಿಸಿ, ಭೇಟಿ ನೀಡಿ ಐದು ಶಾಲೆಗಳ ಸ್ಥಿತಿ-ಗತಿಗಳ ಬಗ್ಗೆ ಸಭೆಗೆ ವಿವರಿಸಿದರು ಹಾಗೂ ಸದರಿ ಶಾಲೆಗೆ ಬೇಕಾದ ಅಗತ್ಯತೆಗಳ ಬಗ್ಗೆ ತಿಳಿಸಿ, ಈ ಸಂಬಂಧ ಸದರಿ ಶಾಲೆಗಳಿಗೆ ಬೇಕಾದ ಅಗತ್ಯತೆಗಳನ್ನು ಪೂರೈಸಲು ಶಿಪರಾಸ್ಸು ಮಾಡಿದರು.
4. ತದನಂತರ ಮೇಲ್ವಿಚಾರಣಾ ಸಮಿತಿಯ ಉಪ ಸಮಿತಿಯ ನಾಲ್ಕನೇ ಗುಂಪಿನ ಸದಸ್ಯರು ಹಾಗೂ ಮೇಲ್ವಿಚಾರಣಾ ಸಮಿತಿಯ ಸಂಯೋಜನಾದಿಕಾರಿಗಳಾದ ಡಾ.ಬಿ.ತಿಪ್ಪೇಸ್ವಾಮಿ ಉಪ ಕುಲಸಚಿವರು, ಅಭಿವೃದ್ಧಿ ವಿಭಾಗ, ಇವರು ಮಾತನಾಡುತ್ತಾ, ತಮ್ಮ ತಂಡವನ್ನು ಸಭೆಗೆ ಪರಿಚಯಿಸಿ, ಭೇಟಿ ನೀಡಿ ಶಾಲೆಯ ಸ್ಥಿತಿ-ಗತಿಗಳ ಬಗ್ಗೆ ಸಭೆಗೆ ವಿವರಿಸಿ, ಸದರಿ ಶಾಲೆಗೆ ಬೇಕಾದ ಅಗತ್ಯತೆಗಳ ಬಗ್ಗೆ ತಿಳಿಸಿ, ಈ ಸಂಬಂಧ ಸದರಿ ಶಾಲೆಗೆ ಬೇಕಾದ ಅಗತ್ಯತೆಗಳನ್ನು ಪೂರೈಸಲು ಶಿಪರಾಸ್ಸು ಮಾಡಿದರು.

Scanned with AnyScanner

ಮಾನ್ಯ ಕುಲಸಚಿವರು ಇವರು ಮಾತನಾಡಿ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರು/ಸದಸ್ಯರು ಹಾಗೂ ಸಂಯೋಜನಾಧಿಕಾರಿಗಳಿಗೆ ಕೋವಿಡ್-19ರ ಎರಡನೇ ಅಲೆಯ ಸಮಯದಲ್ಲೂ ಶಾಲೆಗಳಿಗೆ ಭೇಟಿ ನೀಡಿ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಕಾರ್ಯಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಅಭಿನಂದನೆಗಳನ್ನು ಸಲ್ಲಿಸಿ, Prof.M.R.Doreswamy, Adviser. Education Reforms (Cabinet Rank) Government of Karnataka -ಇವರು ತಿಳಿಸಿರುವ ಕ್ರಿಯಾಯೋಜನೆಯ ಹಂತ-1ರಲ್ಲಿನ ಮತ್ತು ಹಂತ-2 ರಲ್ಲಿನ ಅಂಶಗಳ ಆಧಾರದ ಮೇಲೆ ಶಾಲೆಗಳಗೆ ಭಾಷಾಶಾಸ್ತ್ರ, ಭಾಷೆ ಮತ್ತು ಸಾಕ್ಷರತೆ, ಶಿಕ್ಷಣ ಮತ್ತು ಜ್ಞಾನ ನೀಡುವ ಹಾಗೂ ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಮೂಲ-ಸೌಕರ್ಯಗಳನ್ನು ವಿಶ್ವವಿದ್ಯಾಲಯದ ಅನುದಾನದ ಮಿತಿಯೊಳಗೆ ಒದಗಿಸಬಹುದು ಎಂದು ಸಭೆಗೆ ತಿಳಿಸಿದರು.

ನಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ತರೀಕೆರೆ ॥ತಾ॥ ಚಿಕ್ಕಮಗಳೂರು ॥ಜಿ॥ ಇವರು ಮಾತನಾಡಿ ವಿದ್ಯಾರ್ಥಿಗಳ ಕಲಿಕೆಗೆ ಪ್ರಮುಖ್ಯತೆ ನೀಡಿ ಮೂಲ-ಸೌಕರ್ಯಗಳನ್ನು ನೀಡುವಂತೆ ತಿಳಿಸಿದರು.

ಕೊನೆಯದಾಗಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಮಾನ್ಯ ಕುಲಪತಿಗಳು ಮಾತನಾಡಿ ಕರ್ನಾಟಕ ಸರ್ಕಾರದ ನಿರ್ದೇಶನದಂತೆ ನಮ್ಮ ವಿಶ್ವವಿದ್ಯಾಲಯವು 12 ಸರ್ಕಾರಿ ಶಾಲೆಗಳನ್ನು ದತ್ತು ಪಡೆದಿದ್ದು, ಸದರಿ ಶಾಲೆಗಳ ಅಭಿವೃದ್ಧಿ ಪಡಿಸುವ ಪ್ರಕ್ರಿಯೆಯಲ್ಲಿ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರು/ಸದಸ್ಯರು ಹಾಗೂ ಸಂಯೋಜನಾಧಿಕಾರಿಗಳಿಗೆ ಕೋವಿಡ್-19ರ ಎರಡನೇ ಅಲೆಯ ಸಮಯದಲ್ಲೂ ಶಾಲೆಗಳಿಗೆ ಭೇಟಿ ನೀಡಿ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಕಾರ್ಯಕ್ಕೆ ಅಭಿನಂದನೆಗಳನ್ನು ಸಲ್ಲಿಸಿ, ಈ ಸಂಬಂಧ ಸದರಿ ಶಾಲೆಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಕಾರ್ಯಕ್ರಮಗಳನ್ನು ಅತೀ ತುರ್ತಾಗಿ ಪ್ರಾರಂಭಿಸೋಣ ಎಂದು ಸಭೆಗೆ ತಿಳಿಸಿದರು.

ಈ ಸಂಬಂಧ ದತ್ತು ಪಡೆದಿರುವ ಶಾಲೆಗಳನ್ನು ಅಭಿವೃದ್ಧಿ ಪಡಿಸುವ ಕುರಿತಂತೆ ಪ್ರಕ್ರಿಯೆಯನ್ನು ಆರಂಭಿಸಲು ಕೂಲಂಕುಶವಾಗಿ ಅಧ್ಯಕ್ಷರು ಹಾಗೂ ಸದಸ್ಯರು ಸುದಿರ್ಘವಾಗಿ ಚರ್ಚಿಸಲಾಗಿ ಮೇಲ್ವಿಚಾರಣಾ ಸಮಿತಿಯ ಉಪ ಸಮಿತಿಯ ನೀಡಿದ ವರದಿಯ ಅನುಸಾರ ಶಾಲೆಗಳ ಮೂಲ-ಸೌಕರ್ಯಗಳ ಅಗತ್ಯತೆಗಳ ಅನುಸಾರವಾಗಿ ಅನುಷ್ಠಾನಗೊಳಿಸಲು ಮಾನ್ಯ ಕುಲಪತಿಗಳು ಹಾಗೂ ಮಾನ್ಯ ಕುಲಸಚಿವರ ನಿರ್ದೇಶನದಂತೆ ಅಂತಿಮವಾಗಿ ಅನುಬಂಧ -01 ರಂತೆ ಪ್ರತ್ಯೇಕವಾಗಿ ಶಾಲೆಗಳಿಗೆ ಅಗತ್ಯತೆಯನುಸಾರ ಮೂಲ-ಸೌಕರ್ಯಗಳನ್ನು ಒದಗಿಸಲು ನಿರ್ಣಯಿಸಿ, ಸದರಿ ಶಾಲೆಗಳ ಎಲ್ಲಾ ಶಿಕ್ಷಕರಿಗೆ Orientation Program ಆಯೋಜಿಸುವುದು ಮತ್ತು 12 ಶಾಲೆಗಳಿಗೆ ವಿಶ್ವವಿದ್ಯಾಲಯ ದತ್ತು ಪಡೆದಿರುವುದಕ್ಕೆ ನಾಮಫಲಕವನ್ನು ಅಳವಡಿಸಲು ಹಾಗೂ ಕರ್ನಾಟಕ ಸರ್ಕಾರದ ನಿರ್ದೇಶನದಂತೆ ವಿಶ್ವವಿದ್ಯಾಲಯವು 12 ಸರ್ಕಾರಿ ಶಾಲೆಗಳನ್ನು ದತ್ತು ಪಡೆದಿರುವುದಕ್ಕೆ ಉದ್ಘಾಟನಾ ಕಾರ್ಯಕ್ರಮ ಆಯೋಜಿಸಲು ನಿರ್ಣಯಿಸಲಾಯಿತು.

ಸಭೆಯ ಅಂತ್ಯದಲ್ಲಿ ವಿಶ್ವವಿದ್ಯಾಲಯದ ಅಭಿವೃದ್ಧಿ ವಿಭಾಗದ ಉಪ ಕುಲಸಚಿವರು ಹಾಗೂ ಮೇಲ್ವಿಚಾರಣಾ ಸಮಿತಿಯ ಸಂಯೋಜನಾಧಿಕಾರಿಗಳು ಆದ ಡಾ.ಬಿ.ತಿಪ್ಪೇಸ್ವಾಮಿ, ಇವರು ಮಾತಾನಾಡಿ ಕೋವಿಡ್-19ರ ಎರಡನೇ ಅಲೆಯ ಸಮಯದಲ್ಲೂ ಶಾಲೆಗಳಿಗೆ ಭೇಟಿ ನೀಡಿ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಮೇಲ್ವಿಚಾರಣಾ ಸಮಿತಿಯ ಉಪ ಸಮಿತಿಯ ಸದಸ್ಯರುಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿ, ಮಾನ್ಯ ಅಧ್ಯಕ್ಷರ ಅಪ್ಪಣೆಯಂತೆ ಸಭೆಗೆ ಆಗಮಿಸಿ ಚರ್ಚೆಯಲ್ಲಿ ಪಾಲ್ಗೊಂಡು ಸೂಕ್ತ ಸಲಹೆಗಳನ್ನು ನೀಡಿದ್ದಕ್ಕಾಗಿ ಎಲ್ಲಾ ಸದಸ್ಯರಿಗೆ ವಿಶ್ವವಿದ್ಯಾಲಯದ ಪರವಾಗಿ ವಂದನೆಗಳನ್ನು ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯವಾಯಿತು.

| | | |
|---|---|---|
| (signed) Veerabhadrappa | (signed) | (signed) |
| ಅಧ್ಯಕ್ಷರು | ಕುಲಸಚಿವರು | ಸಂಯೋಜನಾಧಿಕಾರಿಗಳು |
| (ಪ್ರೊ.ಬಿ.ಪಿ.ವೀರಭದ್ರಪ್ಪ) | (ಪ್ರೊ.ಎಸ್.ಎಸ್.ಪಾಟೀಲ್) | (ಡಾ.ಬಿ.ತಿಪ್ಪೇಸ್ವಾಮಿ) |
| ಮಾನ್ಯ ಕುಲಪತಿಯವರು | ಮಾನ್ಯ ಕುಲಸಚಿವರು | ಉಪ ಕುಲಸಚಿವರು, ಅಭಿವೃದ್ಧಿ ವಿಭಾಗ. |

Scanned with AnyScanner

| ಕ್ರ.ಸಂ | ಕುವೆಂಪು ವಿಶ್ವವಿದ್ಯಾಲಯ ದತ್ತು ಪಡೆದಿರುವ ಸರ್ಕಾರಿ ಶಾಲೆಯ ಹೆಸರುಗಳು |
|---|---|
| 01 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಡೇಕಲ್, ಶಿವಮೊಗ್ಗ ॥ತಾ॥ ಶಿವಮೊಗ್ಗ ॥ಜಿ॥ |















| | | | |
|---|---|---|---|
| |  |  |  |
| |  | ಕುವೆಂಪು ವಿಶ್ವವಿದ್ಯಾಲಯ<br>KUVEMPU UNIVERSITY<br>ದತ್ತು ಪಡೆದಿರುವ ಸರ್ಕಾರಿ ಶಾಲೆ<br>ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಡೇಕಲ್, ಶಿವಮೊಗ್ಗ ತಾ॥, ಶಿವಮೊಗ್ಗ ಜಿ॥<br>ಅ-ಅಕ್ಷರ<br>ಆ-ಆಹಾರ<br>AKSHARA DASOHA<br>ಕರ್ನಾಟಕ ಸರ್ಕಾರ<br>OPPO F17 Pro | |


| | |
|---|---|
| 02 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಚಿನಕಟ್ಟೆ ಶಿವಮೊಗ್ಗ ॥ತಾ॥ ಶಿವಮೊಗ್ಗ ॥ಜಿ॥ |



















| 03 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಉರಗಡೂರು, ॥ತಾ॥ ಶಿವಮೊಗ್ಗ ॥ಜಿ॥ |
|---|---|











| | | | |
|---|---|---|---|
| | 2023/3/2 12:36 |  |  |
| |  |  |  |

| | | | |
|---|---|---|---|
| 04 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಪಿಳ್ಳಂಗೆರೆ, ಶಿವಮೊಗ್ಗ ॥ತಾ॥ ಶಿವಮೊಗ್ಗ ॥ಜಿ॥ | | |
| |   |  |  |
| |  |  |  |

| 05 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಲಕ್ಕಿನಕೊಪ್ಪ ಶಿವಮೊಗ್ಗ ॥ತಾ॥ ಶಿವಮೊಗ್ಗ ॥ಜಿ॥ | | |
|---|---|---|---|
| |  |  |  |
| |  |  |  |













SHOT ON REDMI Y3
AI DUAL CAMERA

<table>
<tr><td>06</td><td colspan="2">ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಉಂಬ್ಳೆಬೈಲು, ಶಿವಮೊಗ್ಗ ॥ತಾ॥ ಶಿವಮೊಗ್ಗ ॥ಜಿ॥</td></tr>
<tr><td></td><td>


</td><td rowspan="2">GHPS UMBALEBYLU



SUMMER</td></tr>
<tr><td></td><td>GHPS UMBALEBYLU


</td></tr>
</table>

| 07 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗೋಣಿಬೀಡು, ಭದ್ರಾವತಿ ॥ತಾ॥ ಶಿವಮೊಗ್ಗ ॥ಜಿ॥ |
|---|---|




















<table>
<tr><td>08</td><td colspan="2">ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನೆಲ್ಲಿಸರ, ಭದ್ರಾವತಿ ॥ತಾ॥ ಶಿವಮೊಗ್ಗ ॥ಜಿ॥</td></tr>
<tr><td></td><td>
</td><td>
</td></tr>
<tr><td></td><td>
</td><td>
</td></tr>
</table>








Ganga
Ganga
















| | |
|---|---|
| 09 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಶಂಕರಘಟ್ಟ, ಭದ್ರಾವತಿ ॥ತಾ॥ ಶಿವಮೊಗ್ಗ ॥ಜಿ॥ |



















ಹಿರಿಯ ಪ್ರಾಥಮಿಕ ಶಾಲೆ.





| | | | |
|---|---|---|---|
| 10 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹುಣಸೆಕಟ್ಟೆ, ಭದ್ರಾವತಿ ॥ತಾ॥ ಶಿವಮೊಗ್ಗ ॥ಜಿ॥ | | |
| |   |   |   |
| |   |   |   |

| | |
|---|---|
| 11 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಿ.ಆರ್.ಪ್ರಾಜೆಕ್ಟ್, ಭದ್ರಾವತಿ ॥ತಾ॥ ಶಿವಮೊಗ್ಗ ॥ಜಿ॥ |












| 12 | ಶಾಸಕರ ಸರ್ಕಾರಿ ಮಾದರಿ ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, ತರೀಕೆರೆ, ತರೀಕೆರೆ ॥ತಾ॥ ಚಿಕ್ಕಮಗಳೂರು ॥ಜಿ॥ | | |
|---|---|---|---|
| |  |  |  |
| |  |  |  |

| | | | |
|---|---|---|---|
| |  |  |  |
| |  |  |  |